### ಬಿಕ್ಕಳಿಕೆ



ಚಿತ್ರ ಹಳೇಮನಿ

ಶ್ಯಾಮು: ವೈದ್ಯರೇ ಬಿಕ್ಕಳಿಕೆ ನಿಲ್ಲಲು ಏನಾದರೂ ಮಾತ್ರೆ ಇದ್ದರೆ ಕೊಡಿ. ಅದರ ಬೆಲೆ ಕೊಡುತ್ತೇನೆ.

ವೈದ್ಯ: ಬಿಕ್ಕಳಿಕೆಗೆ ಅಂತ ಮಾತ್ರೆ ಇಲ್ಲ ಕೊಂಚ ಬಗ್ಗು ಎನುತ್ತ ಅವನ ಬೆನ್ನಿಗೆ ಜೋರಾಗಿ ಗುದ್ದಿದರು. ಈಗ ನೋಡು ಬಿಕ್ಕಳಿಕೆ ನಿಂತು ಹೋಯಿತು!

ಶ್ಯಾಮು: ಬಿಕ್ಕಳಿಕೆ ನನಗಲ್ಲ ವೈದ್ಯರೇ, ನನ್ನ ಹೆಂಡತಿಗೆ ಅವಳು ಮನೆಯಲ್ಲೇ ಇದ್ದಾಳೆ!

### ಮಾತಿನ ಗಣಿ

ಈತ: ಮದುವೆ ಮತ್ತು ಮೊಬೈಲ್ ಇವೆರಡರ ವ್ಯತ್ಯಾಸ ಏನು?

ಆತ: ಎರಡೂ ಒಂದೇ ಕಟ್ಟಿಕೊಂಡ ಹೆಂಡತಿ ಹಿಡಿದುಕೊಂಡ ಮೊಬೈಲ್ ಎರಡೂ ಮಾತಿನ ಗಣಿಗಳು. ಬಗೆದಷ್ಟೂ ಮಾತು.

### ಕನ್ನಡಕ

ಗುರು: ಪ್ರಾಣಿಗಳಿಗೆ ಕಣ್ಣಿನ ದೃಷ್ಟಿ ತುಂಬ ಚೆನ್ನಾಗಿರುತ್ತದೆ. ಇದು ಹೇಗೆ ಎಂಬುದನ್ನು ಯಾರಾದರೂ ವಿವರಿಸಿ ಹೇಳುವಿರಾ?

ವಿದ್ಯಾರ್ಥಿ: ನಾನು ಹೇಳಬಲ್ಲೆ ಸಾರ್! ಪ್ರಾಣಿಗಳು ಯಾವಾಗಲಾದರೂ ಕನ್ನಡಕ ಧರಿಸಿ ಓಡಾಡುತ್ತವೆಯೇ? ಇಲ್ಲವಲ್ಲ.

## ಕಷ್ಟ ಪರಂಪರೆ

ಗುರು: ಕಷ್ಟ ಪರಂಪರೆಗಳು ಹಿಂಡು ಹಿಂಡಾಗಿ ಬರುತ್ತವೆ. ಇದಕ್ಕೆ ಯಾರಾದರೂ ಒಂದು ಒಳ್ಳೆಯ ಉದಾಹರಣೆ ಕೊಡಬಲ್ಲಿರಾ?

ಶಿಷ್ಯ: ನಿಮಗೆ ಸಾಲು ಸಾಲಾಗಿ ಆರು ಹೆಣ್ಣು ಮಕ್ಕಳು ಇದ್ದಾರಲ್ಲಾ? ಇದಕ್ಕಿಂತ ಒಳ್ಳೆಯ ಉದಾಹರಣೆ ಬೇರೆ ಇಲ್ಲ ಸರ್ !

(ಸಂಗ್ರಹ) ಎ.ಕೆ. ಪಟ್ಟಾಭಿ

---

ಗುಂಡ: ಕೇವಲ 35 ಮಾರ್ಕ್ಸ್ ಬಂದಿತ್ತು. ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕಿದೆ.

ತಿಮ್ಮ: ಮಾರ್ಕ್ಸ್ ಹೆಚ್ಚಾಗಿ ಬಂತಾ?

ಗುಂಡ: ಇಲ್ಲ ಫೇಲ್ ಅಂತ ಬಂತು.

***

ವಾರ್ತಾ ವಾಚಕ: ಇದೀಗ ಬಂದ ಸುದ್ದಿ, ಪಂಜಾಬಿನ ಸ್ಮಶಾನವೊಂದರ ಬಳಿ ಆರು ಜನರಿದ್ದ ವಿಮಾನವೊಂದು ಉರುಳಿ ಬಿದ್ದು ಉರಿದು ಹೋಗಿದೆ. ಸ್ಥಳೀಯ ಪೊಲೀಸರು ಇದುವರೆಗೂ ನಾಲ್ಕು ನೂರಾ ತೊಂಬತ್ತರಷ್ಟು ಶವಗಳನ್ನು ಪತ್ತೆ ಮಾಡಿದ್ದಾರೆ.

***

ಗುಂಡ: ತಿರುಪತಿಲಿ ಎಲ್ಲಾ ಕಡೆ ಕಂಡಲ್ಲಿ ಗುಂಡು ಕಣೋ ಮಾರಾಯ

ತಿಮ್ಮ: ನಕ್ಸಲರದ್ದಾ?

ಗುಂಡ: ನೋ, ಎಲ್ರದ್ದು ಮಾರಾಯ, ಬಂದೋರೆಲ್ಲಾ ತಲೆ ಬೋಳಿಸಿಕೊಳ್ತಿರೋದ್ರಿಂದ ಕಂಡ ಕಂಡೆಲ್ಲ ಗುಂಡೇ!

***

ಗುಂಡ: ಸತ್ತವರ ಮನೆಗೆ ಹೋಗಿ ಸಾಂತ್ವನ ಹೇಳಿ ಬರೋಣ ಎಂದು ಒಂದು ವಾರದಿಂದ ಪ್ರಯತ್ನಿಸುತಿದ್ದೇನೆ ಸಾಧ್ಯವಾಗ್ತಾನೇ ಇಲ್ಲ.

ತಿಮ್ಮ: ಯಾಕೆ ಸಾರ್, ಹೇಗೆ ಸಾಂತ್ವನ ಹೇಳೋದು ಅಂತ ದುಃಖವಾಗ್ತಾ ಇದೆಯಾ?

ಗುಂಡ: ಇಲ್ಲ ಇಲ್ಲ, ಟೀವಿಯವರು ಮತ್ತು ಪತ್ರಿಕೆಯವರು ಒಂದು ವಾರದಿಂದ ಸಿಗ್ತಾನೇ ಇಲ್ಲ.

***

ತಿಮ್ಮ: ನಿನ್ನ ಮನೆಯಲ್ಲಿ ಎರಡೆರಡು ಸ್ವಿಮ್ಮಿಂಗ್ ಪೂಲ್‌ಗಳನ್ನು ಕಟ್ಟಿಸಿದ್ದಿಯಲ್ಲ ಒಳ್ಳೆಯದೇ. ಆದರೆ ಒಂದರಲ್ಲಿ ನೀರು ಇದೆ ಇನ್ನೊಂದರಲ್ಲಿ ನೀರಿಲ್ಲ ಹಾಗೇಕೆ?

ಗುಂಡ: ನೀರಿಲ್ಲದ ಸ್ವಿಮ್ಮಿಂಗ್ ಪೂಲ್ ಈಜು ಬಾರದವರಿಗಾಗಿ.

***

ಗುಂಡ: ಗುರುತ್ವಾಕರ್ಷಣೆ ಅಂದ್ರೆ ಏನು?

ಪದ್ದಿ: ಗೊತ್ತಿಲ್ಲ.

ಗುಂಡ: ಏನು ಗೊತ್ತಿದೆ ನಿನಗೆ. ಏನೇ ಕೇಳಿದರೂ ಗೊತ್ತಿಲ್ಲ ಅಂತ ಹೇಳ್ತಿಯಾ, ನಿನ್ನ ತಲೆಯಲ್ಲಿ ಸಗಣಿ ತುಂಬಿಕೊಂಡಿದೆ.

ಪದ್ದಿ: ಅದಕ್ಕೇನಾ ನೀವು ಯಾವಾಗಲೂ ನನ್ನ ತಲೆ ತಿನ್ನೋದು.

***

ಪದ್ದಿ: ನನ್ನ ಯಜಮಾನರು ದಿನಾಲೂ ನಾನು ಟೀವಿ ನೋಡುತ್ತಿರುವಾಗಲೆಲ್ಲಾ ನನ್ನನ್ನೇ ನೋಡುತ್ತಾ ಕುಳಿತಿರುತ್ತಾರೆ

ತಿಮ್ಮಿ: ನೀವು ಅಂದ್ರೆ ಅವರಿಗೆ ಅಷ್ಟೊಂದು ಪ್ರೀತಿನಾ?

ಪದ್ದಿ: ಪ್ರೀತಿ ಅಲ್ಲರಿ, ಯಾವಾಗ ಧಾರಾವಾಹಿ ಮುಗಿಯಬಹುದು. ಯಾವಾಗ ನಾನು ಊಟಕ್ಕೆ ಕರೆಯಬಹುದು ಅಂತ.

***

ಸಂದರ್ಶಕ: ನಿನಗೆ ಕಷ್ಟದ ಒಂದು ಪ್ರಶ್ನೆ ಕೇಳಲಾ ಅಥವಾ ತೀರಾ ಸರಳವಾದ ಹತ್ತು ಪ್ರಶ್ನೆಗಳನ್ನು ಕೇಳಲಾ?

ಗುಂಡ: ಕಷ್ಟವಾದರೂ ಪರವಾಗಿಲ್ಲ, ಒಂದೇ ಪ್ರಶ್ನೆಯನ್ನೇ ಕೇಳಿ ಸರ್.

ಸಂದರ್ಶಕ: ಹಗಲು ಮತ್ತು ರಾತ್ರಿ ಇವೆರಡರಲ್ಲಿ ಮೊದಲು ಬರೋದು ಯಾವುದು?

ಗುಂಡ: ಹಗಲು ಸಾರ್!

ಸಂದರ್ಶಕ: ಹಗಲಾ, ಅದು ಹೇಗೆ?

ಗುಂಡ: ಸರ್, ದಯವಿಟ್ಟು ಕ್ಷಮಿಸಿ. ನೀವು ಎರಡನೇ ಪ್ರಶ್ನೆ ಕೇಳಲ್ಲ ಅಂತ ಹೇಳಿದ್ರಿ.

(ಸಂಗ್ರಹ) ಭೋಜರಾಜ ಸೊಪ್ಪಿಮಠ


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.